ಸಂತಾಪ ಸೂಚನೆ

ಮಾನ್ಯ ಉಪ ಸಭಾಧ್ಯಕ್ಷರು :

ಮಾಜಿ ಸಚಿವರಾಗಿದ್ದ ಆರ್. ಶ್ರೀನಿವಾಸ್ ಅವರು ಈ ದಿನ ಬೆಳಗಿನ ಜಾವ ನಿಧನ ಹೊಂದಿರುತ್ತಾರೆಂದು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ದಿವಂಗತರು ದಿನಾಂಕ : 21ನೇ ಏಪ್ರಿಲ್, 1944 ರಂದು ಜನಿಸಿದ್ದು, ಬಿಎಸ್ಸಿ ಪದವೀಧರರಾಗಿದ್ದರಲ್ಲದೆ ವೃತ್ತಿಯಲ್ಲಿ ಕೃಷಿಕರಾಗಿದ್ದರು. 1974 ರಿಂದ 1977ರವರೆಗೆ ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ಮತ್ತು 1991 ರಿಂದ 1995ರವರೆಗೆ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ದಿವಂಗತರು 1994ರಲ್ಲಿ ಹತ್ತನೇ ವಿಧಾನಸಭೆಗೆ ಮುಳಬಾಗಿಲು ಕ್ಷೇತ್ರದಿಂದ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರಲ್ಲದೆ 2004ರಲ್ಲಿ ಹನ್ನೆರಡನೇ ವಿಧಾನಸಭೆಗೆ ಪುನರಾಯ್ಕೆಗೊಂಡಿರುತ್ತಾರೆ ಹಾಗೂ ಶ್ರೀಯುತರು 2006 ರಿಂದ 2007ರ ಅವಧಿಯಲ್ಲಿ ತೋಟಗಾರಿಕಾ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ನೇರ ನಡೆ–ನುಡಿಯ ಸ್ನೇಹ ಜೀವಿಯು ಆಗಿದ್ದಂಥ ಇವರು ನನ್ನ ಆತ್ಮೀಯ ಮಿತ್ರರು ಕೂಡ ಆಗಿದ್ದರು. ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಅಲಂಗೂರಿನ ಮಾನ್ಯ ಆರ್. ಶ್ರೀನಿವಾಸ್‌ರವರು ಇವತ್ತು ಬೆಳಗಿನ ಜಾವ ನಿಧನರಾಗಿದ್ದಾರೆ. ನಾನು ಜನತಾದಳದಲ್ಲಿದ್ದಾಗ ಇವರು ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಆಗ ನಿವು ಕೂಡ ಈ ಸದನದಲ್ಲಿದ್ದಿರಿ. ಇವರು 1994 ರಿಂದ 1999 ರವರೆಗೆ ಈ ಸದನದ ಸದಸ್ಯರಾಗಿದ್ದರು. ಇವರು ಮುಳಬಾಗಿಲು ಕ್ಷೇತ್ರದಿಂದ ಗೆದ್ದು ಬಂದಿದ್ದರು. ಈಗ ಅದು delimitation ನಲ್ಲಿ ಹರಿಜನ ಕ್ಷೇತ್ರವಾಗುವುದರಿಂದ ಅವರು ಸ್ಪರ್ಧಿಸಲು ಸಾಧ್ಯವಾಗಲಿಲ್ಲ. ಇವರು ಇತ್ತೀಚೆಗೆ ಚುನಾವಣಾ ರಾಜಕಾರಣದಲ್ಲಿ ಸಕ್ರಿಯವಾಗಿರಲಿಲ್ಲ. ನನಗೆ ವೈಯಕ್ತಿಕವಾಗಿ ಬಹಳ ಆತ್ಮೀಯ ಸ್ನೇಹಿತರಾಗಿದ್ದರು, ಏಕೆಂದರೆ ನಾನೇ ಅವರು ಕಾಂಗ್ರೆಸ್‌ನಲ್ಲಿದ್ದವರನ್ನು

ಜನತಾ ದಳಕ್ಕೆ ಕರೆದುಕೊಂಡು ಬಂದು, ಜನತಾ ದಳದಿಂದ ಚುನಾವಣೆಗೆ ಸ್ಪರ್ಧಿಸಲು ಟಿಕೇಟ್ ಅನ್ನು ಕೊಟ್ಟು ಶಾಸಕರಾಗುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದು. ಇವರು ಮಾನ್ಯ ಜೆ.ಹೆಚ್. ಪಟೇಲ್‌ರವರ ಕಾಲದಲ್ಲಿ ಸುಮಾರು ಎರಡು ವರ್ಷಗಳ ಕಾಲ ಮಂತ್ರಿಗಳಾಗಿದ್ದರು. ಇವರು ಮೂಲತಃ ಕೃಷಿಕರಾಗಿದ್ದು, ಒಳ್ಳೆಯ ಜಮೀನ್ದಾರರು ಆಗಿದ್ದರು. ಇವರು ತೋಟವನ್ನು ಮಾಡಿದ್ದರು, ನಾನು ಕೂಡ ಅವರ ಮನೆಗೆ, ತೋಟಕ್ಕೆ ಹೋಗಿದ್ದೇನೆ. ಇದರ ಜೊತೆಗೆ ಅತ್ಯಂತ ಸ್ನೇಹ ಜೀವಿ, ಸರಳ ವ್ಯಕ್ತಿ, ನೇರ ಗುಣವಿದ್ದಂಥ ವ್ಯಕ್ತಿಯಾಗಿದ್ದರು. ಇವರು ಯಾವಾಗಲೂ ಜನಪರ ಕಾಳಜಿ ಇಟ್ಟುಕೊಂಡಿದ್ದಂಥ ವ್ಯಕ್ತಿಯಾಗಿದ್ದು, ಕೆಳ ಹಂತದಿಂದ ಬಂದಿದ್ದರು. ಇವರು ಸಹಕಾರ ಸಂಸ್ಥೆಗಳು, PLD Bank, societyಗಳು, ಈ ಮೂಲಕ ಬಂದಂಥವರು, ಹಾಗಾಗಿ ನಿಕಟವಾದಂಥ ಜನ ಸಂಪರ್ಕವನ್ನಿಟ್ಟುಕೊಂಡು, ಜನಮುಖಿಯಾಗಿ, ರೈತರ ಬಗ್ಗೆ, ಬಡವರ ಬಗ್ಗೆ ಅಪಾರವಾದಂಥ ಕಾಳಜಿ ಇಟ್ಟುಕೊಂಡು ಕೆಲಸ ಮಾಡಿದ್ದರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇವರ ಕುಟುಂಬ ವರ್ಗದವರಿಗೆ ಇವರ ನಿಧನದ ದುಃಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹಾರೈಸುತ್ತೇನೆ. ಇವತ್ತು ಒಬ್ಬ ಒಳ್ಳೆಯ ಸ್ನೇಹ ಜೀವಿಯನ್ನು, ಜನಪರ ಕಾಳಜಿ ಇದ್ದಂಥ ವ್ಯಕ್ತಿಯನ್ನು, ರೈತರ ಪರ ಕಾಳಜಿ ಇದ್ದಂಥ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಸಮಾಜಕ್ಕೆ ದೊಡ್ಡ ನಷ್ಟವಾಗಿದೆಯೆಂದು ಹೇಳುತ್ತೇನೆ.

ಉಪಾಧ್ಯಕ್ಷರು : ದಿವಂಗತರಾದ ಮಾನ್ಯ ಆರ್. ಶ್ರೀನಿವಾಸ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಉಪಾಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.